**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1041/2022**

| | | | |
|---|---|---|---|
| **ಹೆಸರು** | **:** | **ಶಿವಶಂಕರ ಸುಬೇದಾರ** | ಚಾ.ಸಾ.22 |
| **ತಂದೆಯ ಹೆಸರು** | **:** | **ಕೃಷ್ಣ** | ಪ್ರಾ.ಸಾ.9 |
| **ವಯಸ್ಸು** | **:** | **54 ವರ್ಷ** | ದಿನಾಂಕಃ 09-10-2025 |
| **ಉದ್ಯೋಗ** | **:** | **PSI** | |
| **ವಾಸಸ್ಥಳ** | **:** | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

2019 ರಿಂದ 2022 ರವರೆಗೆ ರಟಕಲ ಪೋಲಿಸ ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 22-01-2022 ರಂದು ರಾತ್ರಿ 9 ಗಂಟೆಗೆ ಚಾಸಾ 1 ರವರು ನಮ್ಮ ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ಹಾಜರುಪಡಿಸಿದ್ದು ಸದರ ದೂರಿನ ಸಾರಾಂಶದ ಮೇರೆಗೆ ಠಾಣೆ ಗುನ್ನೆ ಸಂಖ್ಯೆಃ 5/2022 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ.

ಈಗ ನೋಡುತ್ತಿರುವ ನಿಪಿ-1ರ ದೂರಿನಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ-1(ಡಿ) ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-13 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ದಿನಾಂಕಃ 22-01-2022 ರಂದು ರಾತ್ರಿ 11 ರಿಂದ 12 ರವರೆಗೆ ಚಾಸಾ 13 ಮತ್ತು 14 ರವರು ಸಮಕ್ಷಮ ಮೃತ ಶಿವಕುಮಾರರವರ ಶವ ತನಿಖಾ ವರದಿಯನ್ನು ತಯಾರಿಸಿದ್ದೇನೆ. ಈಗ ನೋಡುತ್ತಿರುವ ನಿಪಿ-11ರ ಶವ ತನಿಖಾ ವರದಿಯಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಆ ಸಮಯಕ್ಕೆ ಚಾಸಾ-1ರವರು ಸಹ ಇದ್ದರು.

ದಿನಾಂಕ 23-01-2022 ರಂದು ಬೆಳಗ್ಗೆ 11.30 ರಿಂದ 12.30ರವರೆಗೆ ಚಾಸಾ-1ರವರು ತೋರಿಸಿದಂತೆ ಚಾಸಾ-12 ಮತ್ತು 13ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಈಗ ನೋಡುತ್ತಿರುವ ನಿಪಿ-12ರ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಅದೇ ಸಮಯಕ್ಕೆ ನಿಪಿ-3, 4, 9 ಮತ್ತು 10ರ ಭಾವಚಿತ್ರಗಳನ್ನು ಪಡೆದಿದ್ದೇನೆ. ನಂತರ ಚಾಸಾ-2 ರಿಂದ 11ರವರ ಹೇಳಿಕೆಗಳನ್ನು ಠಾಣೆಯಲ್ಲಿ ಪಡೆದುಕೊಂಡಿದ್ದೇನೆ. ಈಗ ನೋಡುತ್ತಿರುವ ನಿಪಿ-5ರ ಹೇಳಿಕೆಯನ್ನು ನಾನು ಪಡೆದಿದ್ದೇನೆ.

ದಿನಾಂಕ 28-01-2022 ರಂದು ಆರೋಪಿಯ ಕರ್ತವ್ಯದ ಬಗ್ಗೆ ಮಾಹಿತಿ ಕುರಿತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜೆಸ್ಕಾಂರವರಿಗೆ ಪತ್ರ ವ್ಯವಹಾರವನ್ನು ಮಾಡಿದ್ದೇನೆ. ಅದೇ ದಿನ ಘಟನಾ ಸ್ಥಳದ ನಕಾಶೆ ತಯಾರಿಸಿ ಕೋಡಲು ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆರವರಿಗೆ ಪತ್ರವನ್ನು ಬರೆದಿದ್ದೇನೆ. ಅದೇ ದಿನ ಘಟನಾ ಸ್ಥಳದಲ್ಲಿ ವಿದ್ಯುತ ಸಂಪರ್ಕ ಇರುವ ಬಗ್ಗೆ ಮಾಹಿತಿ ಕೇಳಿ ಶಾಖಾಧಿಕಾರಿಗಳು, ರಟಕಲರವರಿಗೆ ಪತ್ರವನ್ನು ಬರೆದಿದ್ದೇನೆ.

ದಿನಾಂಕ 02-02-2022 ರಂದು ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಸದರಿ ಆದೇಶವನ್ನು ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳದಲ್ಲಿರುವ ವೈಯರ ಯಾವ ಉದ್ದೇಶಕ್ಕಾಗಿ ಹಾಕಲಾಗಿದೆ ಎಂದು ಮಾಹಿತಿ ಕೇಳಿ ಕಾರ್ಯನಿರ್ವಾಹಕ ಅಭಿಯಂತರರು ಜೆಸ್ಕಾಂರವರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ.

ದಿನಾಂಕ 04-02-2022 ರಂದು ಮೃತ ಶಿವಕುಮಾರರವರ ಶವ ಪರೀಕ್ಷೆ ವರದಿಯನ್ನು ಚಾಸಾ-20ರವರಿಗೆ ಪಡೆದಿದ್ದೇನೆ. ಸದರಿ ಶವ ಪರೀಕ್ಷೆ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-14 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ದಿನಾಂಕ 09-02-2022ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂರವರು ಘಟನಾ ಸ್ಥಳದಲ್ಲಿ ಆರೋಪಿ ಮಾರ್ಗದಾಳು ಆಗಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಮಾಹಿತಿಯನ್ನು ಪತ್ರದ ಮುಖಾಂತರ ನೀಡಿರುತ್ತಾರೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ನಿಪಿ-7ರ ಜೊತೆ ಒಂದು ದಾಖಲೆಯನ್ನು ಸಲ್ಲಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಅದೇ ದಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂರವರು ಶಂಕರರಾವರವರ ಹೊಲದಲ್ಲಿ ಬಾವಿಯ ಪಂಪ ಸೇಟಗೆ ವಿದ್ಯುತ ಸಂಪರ್ಕ ಒದಗಿಸುವ ಉದ್ದೇಶದಿಂದ ಘಟನಾ ಸ್ಥಳದಲ್ಲಿ ವೈಯರಗಳನ್ನು ಹಾಕಲಾಗಿರುತ್ತದೆ ಎಂದು ಒಂದು ಪತ್ರದ ಮುಖಾಂತರ ಸಲ್ಲಿಸಿದ್ದು ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಶಾಖಾಧಿಕಾರಿ, ರಟಕಲರವರಿಂದ ದಿನಾಂಕ 22-01-2022ರಂದು ಮಧ್ಯಾಹ್ನ 1 ರಿಂದ 2.30ರವರೆಗೆ ವಿದ್ಯುತ ಸರಬರಾಜು ಇರುವ ಬಗ್ಗೆ ಮಾಹಿತಿಯನ್ನು ಪತ್ರ ಹಾಗೂ ಲಾಗಸೀಟನ ಮುಖಾಂತರ ಪಡೆದಿದ್ದೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-16 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಎರಡು ಪುಟಗಳಲ್ಲಿರುವ ಲಾಗಸೀಟಗಳನ್ನು ನಿಪಿ-17 ಎಂದು ಗುರುತಿಸಲಾಯಿತು.

ದಿನಾಂಕ 22-02-2022ರಂದು ಚಾಸಾ-18ರವರಿಂದ ಗುನ್ನೆ ಸ್ಥಳದ ನಕಾಶೆಯನ್ನು ಪಡೆದಿದ್ದೇನೆ.

ಚಾಸಾ-18ರವರು ಸಲ್ಲಿಸಿದ ಪತ್ರವನ್ನು ನಿಪಿ-18 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-18(ಎ) ಎಂದು ಹಾಗೂ ಗುನ್ನೆ ಸ್ಥಳದ ನಕಾಶೆಯನ್ನು ನಿಪಿ-19 ಎಂದು ಗುರುತಿಸಲಾಯಿತು. ದಿನಾಂಕ 14-03-2022 ರಂದು ಚಾಸಾ-15ರವರಿಂದ ವಿದ್ಯುತ ಅಪಘಾತದ ತನಿಖಾ ವರದಿಯನ್ನು ಪಡೆದಿದ್ದೇನೆ. ಸದರಿ ತನಿಖಾ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-23ರವರಿಗೆ ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ZHT ವಕೀಲರಿಂದಃ**

ದೂರನ್ನು ಕನ್ನಡ ಭಾಷೆಯಲ್ಲಿ ಕೈ ಬರಹದಿಂದ ಬರೆಯಲಾಗಿದೆ. ದೂರಿನಲ್ಲಿ ಚಾಸಾ-1ರವರ ಸಹಿ ಇದೆ. ಜೆಸ್ಕಾಂ ಅಧಿಕಾರಿಗಳಿಗೆ ಚಾಸಾ-1 ಅಥವಾ ಗ್ರಾಮಸ್ಥರು ದೂರು ಸಲ್ಲಿಸಿರುವ ಬಗ್ಗೆ ನಾನು ಅವರಿಂದ ಹೇಳಿಕೆ ಪಡೆದಿಲ್ಲ. ರಾತ್ರಿ 9 ಗಂಟೆಗೆ ನನಗೆ ಮೊಟ್ಟ ಮೊದಲನೇದಾಗಿ ಘಟನೆಯ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ರಾತ್ರಿ 8 ಗಂಟೆ ಸಮಯಕ್ಕೆ ಗ್ರಾಮದ ದಳಪತಿ ನನಗೆ ಕರೆ ಮಾಡಿ ಘಟನೆ ಬಗ್ಗೆ ತಿಳಿಸಿದಾಗ ಕಾರಣ ಆಗಲೇ ನಮ್ಮ ಸಿಬ್ಬಂದಿಗೆ ಘಟನೆ ಸ್ಥಳಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಘಟನಾ ಸ್ಥಳಕ್ಕೆ ಹೋಗಿರುವ ಸಿಬ್ಬಂದಿಯ ಹೇಳಿಕೆಗಳನ್ನು ಪಡೆದಿಲ್ಲ. ಚಾಸಾ-15 ರಿಂದ 18ರವರ ಹೇಳಿಕೆಗಳನ್ನು ಪಡೆದಿಲ್ಲ.

ನಮ್ಮ ಪೋಲಿಸ ಠಾಣೆಯಿಂದ ಮುಖರಂಭಾ ಗ್ರಾಮ 3 ಕಿ.ಮೀ. ದೂರದಲ್ಲಿದೆ. ಶವವನ್ನು ನಾನು ಘಟನಾ ಸ್ಥಳದಲ್ಲಿ ನೋಡಿಲ್ಲ ಎಂದರೆ ಸರಿ. ರಾತ್ರಿ 8.10 ರಿಂದ 8.20 ಗಂಟೆ ಸುಮಾರಿಗೆ ಜೆಸ್ಕಾಂ ಅಧಿಕಾರಿಗಳಿಗೆ ಘಟನೆ ಬಗ್ಗೆ ನಾನು ಕರೆ ಮುಖಾಂತರ ತಿಳಿಸಿದ್ದೇನೆ. ಜಮೀನಿನ ಮಾಲೀಕರಿಗೆ ವಿದ್ಯುತ ಸಂಪರ್ಕ ಪಡೆದಿರುವ ಬಗ್ಗೆ ಮಾಹಿತಿ ಪಡೆದಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ 2009ರಲ್ಲಿ ವಿದ್ಯುತ ಸಂಪರ್ಕ ಪಡೆದಿರುವ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತನಿಖೆಯ ಪ್ರಕಾರ ಎಷ್ಟು ವರ್ಷದ ಘಟನಾ ಸ್ಥಳದಲ್ಲಿದ್ದ ವೈಯರನಲ್ಲಿ ವಿದ್ಯುತ ಸಂಪರ್ಕವಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಸದರಿ ವೈಯರಿನಲ್ಲಿ ವಿದ್ಯುತ ಸಂಪರ್ಕ ಇತ್ತು ಎಂದು ನುಡಿಯುತ್ತಾರೆ.

ಘಟನಾ ಸ್ಥಳಕ್ಕೆ ಬಂದ ವೈಯರ ಯಾವ ಟಿ.ಸಿ.ದಿಂದ ಬಂದಿರುತ್ತದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಮುಖರಂಭಾ ಟಿ.ಸಿ.ದಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ಖಬರಸ್ತಾನ ಟಿ.ಸಿ.ದಿಂದ 58 ವಿದ್ಯುತ ಕಂಬಗಳ ಮುಖಾಂತರ ಘಟನಾ ಸ್ಥಳಕ್ಕೆ ವೈಯರ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖಬರಸ್ತಾನ ಟಿ.ಸಿ.ದಿಂದ 4 ಕಂಬಗಳ ನಂತರ ಕಟ್ ಪೌಂಟ್ ಇದ್ದು 4 ಕಂಬಗಳ ನಂತರ ವಿದ್ಯುತ ಸಂಪರ್ಕ ಇರಲಿಲ್ಲ ಎಂದರೆ ಸಾಕ್ಷಿ ವಿದ್ಯುತ ಸಂಪರ್ಕ ಇತ್ತು ಎಂದು ನುಡಿಯುತ್ತಾರೆ.

ಮುಖರಂಭಾ ಗ್ರಾಮದಿಂದ ಘಟನಾ ಸ್ಥಳ 200 ಮೀಟರ ದೂರದಲ್ಲಿದೆ. ಮುಖರಂಭಾ ಗ್ರಾಮದಿಂದ ಘಟನೆಯಾದ ಹೊಲ ಕಾಣುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಘಟನೆಯಾದ ಹೊಲದಲ್ಲಿ ಶಬ್ದ ಬಂದರೇ

ಮುಖರಂಭಾ ಗ್ರಾಮದಲ್ಲಿ ಕೇಳುವುದಿಲ್ಲ ಎಂದರೆ ಸರಿ. ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಆರೋಪಗಳೆಲ್ಲ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮೃತ ಶಿವಕುಮಾರರವರಿಗೆ ಯಾವುದೇ ವಿದ್ಯುತ ತಗುಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಆರೋಪ ಸಾಭೀತು ಆಗದೇ ಇದ್ದರು ಸಹ ಚಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕರೆ ಮುಖಾಂತರ ಮಾಹಿತಿ ಬಂದಾಗ ನಾನು ಪ್ರ.ವ.ವರದಿಯನ್ನು ದಾಖಲಿಸಿಲ್ಲ. ಮೃತ ಶಿವಕುಮಾರ ಹಾಗೂ ಅವರ ಕುಟುಂಬಸ್ಥರ ಮಧ್ಯ ಹೇಗೆ ಸಂಬಂಧವಿತ್ತು ಎಂದು ತೋರಿಸಲು ಅವರ ಅಕ್ಕ ಪಕ್ಕದ ಮನೆಯವರ ಹೇಳಿಕೆಗಳನ್ನು ಪಡೆದಿಲ್ಲ. ಘಟನೆ ಬಗ್ಗೆ ತಹಶೀಲ್ದಾರರವರಿಗೆ ಮಾಹಿತಿಯನ್ನು ನೀಡಿಲ್ಲ. ಲೋಕೋಪಯೋಗಿ ಇಲಾಖೆಯವರು ನಕಾಶೆ ಮಾಡಿಕೊಡಿ ಎಂದು ಹೇಳುವ ಅಧಿಕಾರ ನನಗೆ ಇಲ್ಲ ಮತ್ತು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಜೊತೆ ಇರುವ ನಕಾಶೆಯಲ್ಲಿ ಸರ್ವೆ ನಂಬರ ಉಲ್ಲೇಖವಿಲ್ಲ ಎಂದರೆ ಸರಿ. ಸದರಿ ನಕಾಶೆಯನ್ನು ಇಂತಹ ಸ್ಥಳದಲ್ಲಿ ಮೃತ ದೇಹ ಸಿಕ್ಕಿರುವ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಇಂತಹ ಸ್ಥಳದಲ್ಲಿಯೇ ಮೃತ ದೇಹ ಇತ್ತು ಎಂದು ತೋರಿಸಲು ಯಾವುದೇ ಭಾವಚಿತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ.

ಜಮೀನಿನ ಮಾಲೀಕರ ಹೇಳಿಕೆ ಪಡೆದುಕೊಂಡರೇ ಸತ್ಯಾಂಶ ಹೊರಗೆ ಬರುತ್ತದೆ ಎಂದು ತಿಳಿದು ಸದರಿ ಜಮೀನಿನ ಮಾಲೀಕರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರರವರಿಗೆ ನಾನು ಯಾವುದೇ ಮಾಹಿತಿಯನ್ನು ಕೇಳಿಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**